ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ,
ದಾವಣಗೆರೆ–577007.

ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡಾವಳಿಗಳು ದಿನಾಂಕ:11.08.2023

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007
ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಂ ಃ

ಸಂಖ್ಯೆ: ದಾವಿವಿ/ಪ್ರಾಧಿಕಾರ/ವಿವಿಪ/45/2023–24/1793 ದಿನಾಂಕ:18.08.2023

ಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ ಃ ದಿನಾಂಕ:11.08.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡಾವಳಿಗಳು.

*****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ–II ರ ಪ್ರಕರಣ 16(i)ರ ರೀತ್ಯ ದಿನಾಂಕ:11.08.2023 ರಂದು ಜರುಗಿದ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–II ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,
ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ,

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಹಣಕಾಸು/ಪರೀಕ್ಷಾಂಗ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ/ಆರ್.ಎನ್.ಡಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:11.08.2023ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಡಾ. ಲಿಂಗರಾಜ್ ಪೂಜಾರ್, ಪ್ರಾಂಶುಪಾಲರು : ಸದಸ್ಯರು
3. ಡಾ. ದಿವಾಕರ ನಾಯ್ಕ ಕೆ.ಎಸ್, ಪ್ರಾಂಶುಪಾಲರು : ಸದಸ್ಯರು
4. ಡಾ. ಪ್ರೇಮ ಪಿ.ಎಂ. ಪ್ರಾಂಶುಪಾಲರು : ಸದಸ್ಯರು
5. ಡಾ. ನವೀನ್ ನಾಗರಾಜ್, ಪ್ರಾಂಶುಪಾಲರು : ಸದಸ್ಯರು
6. ಡಾ. ಕರಿಬಸಪ್ಪ, ಪ್ರಾಂಶುಪಾಲರು : ಸದಸ್ಯರು
7. ಡಾ. ನಾಗರಾಜ ಕೆ.ಟಿ. ಪ್ರಾಂಶುಪಾಲರು : ಸದಸ್ಯರು
8. ಶ್ರೀಮತಿ ಜಯಲಕ್ಷ್ಮಿ ಎಂ. ಆರ್., ಪ್ರಾಂಶುಪಾಲರು : ಸದಸ್ಯರು
9. ಪ್ರೊ. ಶಿಶುಪಾಲ ಎಸ್., ಪ್ರಾಧ್ಯಾಪಕರು : ಸದಸ್ಯರು
10. ಪ್ರೊ. ಜೆ.ಕೆ. ರಾಜು, ಪ್ರಾಧ್ಯಾಪಕರು : ಸದಸ್ಯರು
11. ಪ್ರೊ. ವಿ. ಕುಮಾರ್, ಪ್ರಾಧ್ಯಾಪಕರು : ಸದಸ್ಯರು
12. ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು : ಸದಸ್ಯರು
13. ಪ್ರೊ. ಸುಚಿತ್ರ ಎಸ್., ಪ್ರಾಧ್ಯಾಪಕರು : ಸದಸ್ಯರು
14. ಪ್ರೊ. ಲಕ್ಷ್ಮಣ್ ಪಿ, ಡೀನರು, ವಾಣಿಜ್ಯ ನಿಕಾಯ : ಸದಸ್ಯರು
15. ಪ್ರೊ. ರಾಮಲಿಂಗಪ್ಪ, ಡೀನರು, ವಿಜ್ಞಾನ ನಿಕಾಯ : ಸದಸ್ಯರು
16. ಪ್ರೊ. ವೆಂಕಟೇಶ್ ಕೆ., ಡೀನರು, ಶಿಕ್ಷಣ ನಿಕಾಯ : ಸದಸ್ಯರು
17. ಪ್ರೊ. ಪಲಾಟೆ ವೆಂಕಟರಾವ್ ಮಾರುತಿರಾವ್, ಡೀನರು : ಸದಸ್ಯರು
18. ಪ್ರೊ. ಮಹಾಬಲೇಶ್ವರ ಯು.ಎಸ್, ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ಘಟಕ : ಸದಸ್ಯರು
19. ಪ್ರೊ. ಕೆ.ಬಿ. ರಂಗಪ್ಪ, ನಿರ್ದೇಶಕರು, ಸಿ.ಡಿ.ಸಿ. ವಿಭಾಗ : ಸದಸ್ಯರು
20. ಡಾ. ಪ್ರಕಾಶ್ ಡಿ.ಜಿ. ನಿರ್ದೇಶಕರು, ಪಿ.ಎಂ.ಇ. ಬೋರ್ಡ್ : ಸದಸ್ಯರು
21. ಡಾ. ಶಶಿಧರ್ ಆರ್, ಹಣಕಾಸು ಅಧಿಕಾರಿಗಳು : ಸದಸ್ಯರು
22. ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
23. ಶ್ರೀಮತಿ ಸರೋಜ ಬಿ.ಬಿ., ಕುಲಸಚಿವರು : ಸದಸ್ಯ ಕಾರ್ಯದರ್ಶಿ

ಪ್ರಾರಂಭದಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ, ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು. ನಂತರ ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 01(a)–(08/23)

–ಃ ಟಿಪ್ಪಣಿ ಃ–

ವಿಷಯಃ ದಿನಾಂಕ:16.06.2023 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:16.06.2023 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ದಿನಾಂಕ:05.07.2023 ರಂದು ನೋಂದಾಯಿತ ಅಂಚೆ ಮೂಲಕ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:11.08.2023 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:16.06.2023 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಭಾ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಬಿ.ಓ.ಎಸ್. ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 02(a)–(08/23)

–ಃ ಟಿಪ್ಪಣಿಃ –

ವಿಷಯಃ ಕಲಾ ನಿಕಾಯದ ನಡಾವಳಿಗಳ ದೃಢೀಕರಣ ಕುರಿತು.

*****

ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಎಲ್ಲಾ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ (CBCS) ಸಮಾಜಶಾಸ್ತ್ರ ಪದವಿಯ ಪರಿಷ್ಕೃತ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023 ರಂದು ಕಲಾ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:11.08.2023ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಎಲ್ಲಾ ಸ್ನಾತಕ ಪದವಿಯ 5 & 6 ನೇ ಸೆಮಿಸ್ಟರ್‌ನ ಪಠ್ಯಕ್ರಮ ಹಾಗೂ ಸ್ನಾತಕೋತ್ತರ (CBCS) ಸಮಾಜಶಾಸ್ತ್ರ ಪದವಿಯ ಪರಿಷ್ಕೃತ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023ರಂದು ಜರುಗಿದ ಕಲಾ ನಿಕಾಯ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಬಿ.ಓ.ಎಸ್. ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 02(b)–(08/23)

–ಃಟಿಪ್ಪಣಿಃ–

ವಿಷಯಃ ವಿಜ್ಞಾನ ನಿಕಾಯದ ನಡಾವಳಿಗಳ ದೃಢೀಕರಣ ಕುರಿತು.

*****

ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ಎಲ್ಲಾ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ (CBCS) MCA ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023ರಂದು ವಿಜ್ಞಾನ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:11.08.2023ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ಎಲ್ಲಾ ಸ್ನಾತಕ ಪದವಿಯ 5 & 6 ನೇ ಸೆಮಿಸ್ಟರ್‌ನ ಪಠ್ಯಕ್ರಮ (ಆಹಾರ ತಂತ್ರಜ್ಞಾನ : 1 ರಿಂದ 6ನೇ ಸೆಮಿಸ್ಟರ್) ಹಾಗೂ ಸ್ನಾತಕೋತ್ತರ MCA ಪದವಿ ಪಠ್ಯಕ್ರಮಕ್ಕೆ(CBCS) ಸಂಬಂಧಿಸಿದಂತೆ ದಿನಾಂಕ:08.08.2023ರಂದು ಜರುಗಿದ ವಿಜ್ಞಾನ ನಿಕಾಯ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಬಿ.ಓ.ಎಸ್. ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 02(c)–(08/23)

–ಃಟಿಪ್ಪಣಿಃ–

ವಿಷಯಃ ವಾಣಿಜ್ಯ ನಿಕಾಯದ ನಡಾವಳಿಗಳ ದೃಢೀಕರಣ ಕುರಿತು.

*****

ವಿಶ್ವವಿದ್ಯಾನಿಲಯದ ವಾಣಿಜ್ಯ ನಿಕಾಯದ ಎಲ್ಲಾ ಸ್ನಾತಕ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023ರಂದು ವಾಣಿಜ್ಯ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:11.08.2023ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದ ವಾಣಿಜ್ಯ ನಿಕಾಯದ ಎಲ್ಲಾ ಸ್ನಾತಕ ಪದವಿಯ 5 & 6 ನೇ ಸೆಮಿಸ್ಟರ್‌ನ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023ರಂದು ಜರುಗಿದ ವಾಣಿಜ್ಯ ನಿಕಾಯ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಬಿ.ಓ.ಎಸ್. ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 02(d)–(08/23)

–ಃಟಿಪ್ಪಣಿಃ–

ವಿಷಯಃ ಶಿಕ್ಷಣ ನಿಕಾಯದ ನಡಾವಳಿಗಳ ದೃಢೀಕರಣ ಕುರಿತು.

*****

ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಎಲ್ಲಾ ಸ್ನಾತಕ ಪದವಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023ರಂದು ಶಿಕ್ಷಣ ನಿಕಾಯದ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:11.08.2023ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಎಲ್ಲಾ ಸ್ನಾತಕ ಪದವಿಯ 5 & 6 ನೇ ಸೆಮಿಸ್ಟರ್‌ನ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:08.08.2023ರಂದು ಜರುಗಿದ ಶಿಕ್ಷಣ ನಿಕಾಯ ಸಭಾ ನಡಾವಳಿಗಳ ಕುರಿತು ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 03(a)–(08/23)

–ಃಟಿಪ್ಪಣಿಃ–

ವಿಷಯಃ ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ 03 ಆಧ್ಯಾದೇಶಗಳನ್ನು ಕೆಲವು ತಿದ್ದುಪಡಿಯೊಂದಿಗೆ ಮಾನ್ಯ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸುವ ಕುರಿತು.

*****

ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ 03 ಆಧ್ಯಾದೇಶಗಳನ್ನು ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸಲಾಗಿತ್ತು. ಆದರೆ, ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು ಸದರಿ ಆಧ್ಯಾದೇಶಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಪುನಃ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಆಧ್ಯಾದೇಶಗಳನ್ನು ತಿದ್ದುಪಡಿ ಮಾಡಲಾಗಿದ್ದು, ದಿನಾಂಕ:16.06.2023ರ ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ದಿನಾಂಕ:17.06.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು 2 ವಾರದೊಳಗಾಗಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರಿಗೆ ಸಲ್ಲಿಸಬೇಕಾಗಿತ್ತು. ಆದರೆ, ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಕಾರಣಗಳಿಂದ ಸದರಿ ಆಧ್ಯಾದೇಶಗಳನ್ನು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರಿಗೆ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ, ಈಗ ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿವರಿಗೆ ಆಧ್ಯಾದೇಶಗಳನ್ನು ಸಲ್ಲಿಸಲು ದಿನಾಂಕ:11.08.2023ರ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ಕ್ರ.ಸಂ	ಆಧ್ಯಾದೇಶಗಳು (ORDINANCES)
01	ORDINANCES GOVERNING THE ACTS OF PUNISHMENT FOR BREACH OF DUTIES, MISBEHAVIOUR AND INDISCIPLINE BY PERSONS INVOLVED IN UNIVERSITY EXAMINATION WORK.
02	ORDINANCES GOVERNING THE ACTS OF INDISCIPLINE AND MALPRACTICE IN DAVANGERE UNIVERSITY EXAMINATIONS.
03	ORDINANCES GOVERNING THE PROCEDURE FOR REVALUATION/ CHALLENGE VALUATION OF ANSWER BOOKS OF THE UNIVERSITY EXAMINATIONS.

ನಿರ್ಣಯ

ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ ಈ ಮೇಲ್ಕಂಡ 03 ಆಧ್ಯಾದೇಶಗಳನ್ನು ಕೆಲವು ತಿದ್ದುಪಡಿಯೊಂದಿಗೆ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಐ.ಕ್ಯೂ.ಎ.ಸಿ ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 04(a)–(08/23)

–:ಟಿಪ್ಪಣಿ:–

ವಿಷಯ: **2022–23ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಅನುಮೋದಿಸುವ ಕುರಿತು.**

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಕರಡು ವರದಿಯನ್ನು ಸಿದ್ದಪಡಿಸಲಾಗಿದ್ದು, ಸದರಿ ವರದಿಯನ್ನು ದಿನಾಂಕ:11.08.2023 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿರುವ ಇತರೆ ವಿಷಯಗಳು

ಎಂ.ಸಿ.ಎ. ವಿಭಾಗ	
ವಿಷಯ ಸಂಖ್ಯೆ:	ವಿ.ವಿ.ಪ. 05(a)–(08/23)

–ಃ ಟಿಪ್ಪಣಿಃ–

ವಿಷಯಃ **Master of Computer Application** ಕೋರ್ಸ್‌ನ ನಿಯಮಾವಳಿ (Regulations) ಗಳನ್ನು ಅನುಮೋದಿಸುವ ಕುರಿತು.

*****

ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಹೊಸದಾಗಿ Master of Computer Application Course (MCA) ನ್ನು AICTE ಯ ಅನುಮೋದನೆಯೊಂದಿಗೆ 2023–24ನೇ ಸಾಲಿನಲ್ಲಿ ಪ್ರಾರಂಭಿಸುವ ಸಂಬಂಧದ ನಿಯಮಾವಳಿ (Regulations) ಗಳನ್ನು ದಿನಾಂಕ:11.08.2023ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

ನಿರ್ಣಯ

ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಹೊಸದಾಗಿ Master of Computer Application Course (MCA) ನ್ನು AICTE ಯ ಅನುಮೋದನೆಯೊಂದಿಗೆ 2023–24ನೇ ಸಾಲಿನಲ್ಲಿ ಪ್ರಾರಂಭಿಸುವ ಸಂಬಂಧದ ನಿಯಮಾವಳಿ(Regulations) ಗಳ ಕುರಿತು ಚರ್ಚಿಸಿದ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು